# <u>ತೆಲಂಗಾಣ ವಿಚಾರದಲ್ಲಿ ಯುಪಿಎ ವಾಸ್ತಾವ ಉದ್ದೇಶವೇನು?</u>


–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)


ಕಳೆದ ಒಂದು ದಶಕದಿಂದ ತೆಲಂಗಾಣ ವಿಚಾರದಲ್ಲಿ ಯುಪಿಎ ಸರ್ಕಾರ ವ್ಯರ್ಥಾಲಾಪ ಮಾಡಿದೆ. ತೆಲಂಗಾಣ ಪ್ರತ್ಯೇಕ ರಾಜ್ಯ ನಿರ್ಮಿಸಲು ಸರ್ಕಾರ ತತ್ವಶಃ ಒಪ್ಪಿಗೆ ಸೂಚಿಸಿದೆ ಎಂದು ಡಿಸೆಂಬರ್ ೨೦೦೯ರಂದು ಶ್ರೀ ಪಿ.ಚಿದಂಬರಂ ಪ್ರಕಟಿಸುವವರೆಗೂ ದೇಶ ಕಾಯಬೇಕಾಯಿತು. ಆದರೆ ನಂತರ ತನ್ನ ಮಾತಿನಿಂದ ಹಿಂದೆ ಸರಿದ ಸರ್ಕಾರ, ಇಡೀ ವಿಚಾರವನ್ನು ಪರಿಶೀಲಿಸಲು ನ್ಯಾಯಮೂರ್ತಿ ಶ್ರೀ ಕೃಷ್ಣ ಸಮಿತಿ ನೇಮಿಸಿತು. ಸಮಿತಿ ನಿಷ್ಫಲವಾಯಿತು.

೨೦೧೩ರಲ್ಲಿ ಮತ್ತೊಮ್ಮೆ ತೆಲಂಗಾಣ ರಾಜ್ಯ ಸ್ಥಾಪಿಸುವ ತಾತ್ವಿಕ ನಿರ್ಧಾರ ತೆಗೆದುಕೊಂಡಿತು. ದೀರ್ಘ ವಿಳಂಬದ ನಂತರ ಸಂಪುಟದ ಅನುಮೋದನೆ ನೀಡಲಾಯಿತು. ಸರ್ಕಾರದ ನಿರ್ಧಾರದಿಂದ ಸಕಾರಾತ್ಮಕ ಹಾಗೂ ನಕಾರಾತ್ಮಕ ಪ್ರತಿಕ್ರಿಯೆಗಳು ಉದ್ಭವಿಸಿ ಸಂಸತ್ ಅಧಿವೇಶನ ನಡೆಸಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ತೆಲಂಗಾಣ ಪ್ರತ್ಯೇಕ ರಾಜ್ಯ ಸೃಷ್ಟಿಸುವ ಪಕ್ಷದಲ್ಲಿ ಭಾಜಪ ಇದೆ ಎಂದು ಈಗಾಗಲೆ ಸ್ಪಷ್ಟಪಡಿಸಲಾಗಿದೆ. ಇದೇ ಸಮಯದಲ್ಲಿ ಸೀಮಾಂಧ್ರ ಪ್ರಾಂತ್ಯದ ಜನರ ನ್ಯಾಯಬದ್ಧ ಆಶೋತ್ತರಗಳಿಗೆ ಸ್ಪಂದಿಸಬೇಕು ಎಂದೂ ಸಹ ನಾವು ಮನವಿ ಮಾಡಿಕೊಂಡಿದ್ದೇವೆ. ಇವೆರಡೂ ಬಿಕ್ಕಟ್ಟುಗಳ ನಿವಾರಣೆ ಅಸಾಧ್ಯವೂ ಅಲ್ಲ, ಕ್ಲಿಷ್ಟಕರವೂ ಅಲ್ಲ. ಯುಪಿಎ ಈ ದಿಕ್ಕಿನಲ್ಲಿ ಪರಿಣಾಮಕಾರಿ ಹೆಜ್ಜೆ ಇಡುವಲ್ಲಿ ಸೋತಿರುವುದು ವಿಷಾದನೀಯ.

ಈ ಹಿಂದೆ ನಾನು ತಿಳಿಸಿದಂತೆ, ಸಂಧಾನ ಮತ್ತು ಸಾಮರಸ್ಯದೊಂದಿಗೆ ಸರಾಗವಾದ ಕ್ರಮಗಳ ಮೂಲಕ ಮೂರು ಹೊಸ ರಾಜ್ಯಗಳಾದ ಜಾರ್ಖಂಡ್, ಛತ್ತೀಸ್‌ಘಡ್ ಹಾಗೂ ಉತ್ತರಾಖಂಡ್ ಸ್ಥಾಪನೆಯನ್ನು ಎನ್‌ಡಿಎ ಸರ್ಕಾರ ಸಾಧಿಸಿ ತೋರಿದೆ. ಆದರೆ ಯುಪಿಎ ಸರ್ಕಾರ ತೆಲಂಗಾಣ ರಾಜ್ಯವನ್ನು ಸೃಷ್ಟಿಸುವಲ್ಲಿ ಬಿಕ್ಕಟ್ಟಿಗೆ ಎಡೆಮಾಡಿಕೊಟ್ಟಿದೆ. ಹಾಲಿ ಸಂಸತ್ ಅಧಿವೇಶನಕ್ಕೆ ಕೇವಲ ಎಂಟು ದಿವಸಗಳು ಉಳಿದಿವೆ. ಈ ಎಂಟು ದಿವಸಗಳಲ್ಲೂ ಬರುವ ಎರಡು ಶುಕ್ರವಾರಗಳು ಖಾಸಗಿ ಸದಸ್ಯರ ಕಾರ್ಯಕಲಾಪಕ್ಕೆ ಮುಡಪಾಗಿವೆ. ಆದ್ದರಿಂದ ಚಾಲ್ತಿಯಲ್ಲಿರುವ ಸಂಸತ್ ಅಧಿವೇಶನದಲ್ಲಿ ಉಳಿದಿರುವ ಕೇವಲ ಆರು ದಿವಸಗಳಲ್ಲಿ ಶಾಸನ ರೂಪಿಸಬೇಕಾಗಿದೆ. ಆಂಧ್ರ ಪ್ರದೇಶ(ಪುನರಚನೆ) ಮಸೂದೆಯನ್ನು ಈ ವರೆಗೂ ಸಂಸತ್‌ನಲ್ಲಿ ಮಂಡಿಸಲಾಗಿಲ್ಲ. ಎರಡರಲ್ಲಿ ಯಾವ ಸದನದಲ್ಲಿ ಮೊದಲು ಮಸೂದೆಯನ್ನು ಮಂಡಿಸಲಾಗುವುದು ಎಂಬ ಸ್ಪಷ್ಟತೆ ಕಡೇ ಕ್ಷಣದಲ್ಲೂ ಸರ್ಕಾರಕ್ಕಿಲ್ಲ. ತೆಲಂಗಾಣ ರಾಜ್ಯದ ಸೃಷ್ಟಿಗೆ ಕಾನೂನುಬದ್ಧ ಹಾಗೂ ಸಂವಿಧಾನ ಬದ್ಧ ಮಾರ್ಗವನ್ನು ಯುಪಿಎ ಸರ್ಕಾರ ಅನುಸರಿಸುತ್ತಿದೆಯೇ ಎಂಬ ಸಂದೇಹವೂ ಮೂಡಿದೆ. ಯುಪಿಎ ಈ ವಿಚಾರದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂಬ ಗುಮಾನಿ ನನ್ನ ಮನಸ್ಸಿನಲ್ಲಿ ನೆಲೆಯೂರಿದೆ. ಹಾಲಿ ಅಧಿವೇಶನದಲ್ಲಿ ಮತ್ತು ಒಟ್ಟಾರೆ ಯುಪಿಎ ಆಳ್ವಿಕೆಯ ಅವಧಿಯಲ್ಲಿ ತೆಲಂಗಾಣ ರಾಜ್ಯದ ಸೃಷ್ಟಿಯ ವಿಚಾರವನ್ನು ನಿಷ್ಕ್ರಿಯಗೊಳಿಸುವ ದುರುದ್ದೇಶ ಯುಪಿಎಗೆ ಇದ್ದಂತಿದೆ?

ಪ್ರತ್ಯೇಕ ರಾಜ್ಯ ಸೃಷ್ಟಿಸುವ ವಿಚಾರ ಜನರ ಭಾವನೆಯನ್ನು ಕೆರಳಿಸುತ್ತದೆ. ಒಮ್ಮೆ ಜನರ ಆಶೋತ್ತರಗಳಿಗೆ ಭರವಸೆ ಮೂಡಿಸಿ ನಂತರ ನೀರೆರೆಚುವ ರಾಜಕೀಯ ಪಕ್ಷದ ಪ್ರಯತ್ನ ನಿಜಕ್ಕೂ ನ್ಯಾಯಸಮ್ಮತವಲ್ಲ. ಎರಡೂ ಸದನಗಳಲ್ಲೂ ಆಂಧ್ರ ಪ್ರದೇಶ(ಪುನರಚನೆ) ಮಸೂದೆಯನ್ನು ಯುಪಿಎ ಸರ್ಕಾರ ಮಂಡಿಸಿ ಅನುಮೋದನೆ ಪಡೆಯುವ ತ್ವರಿತ ಕ್ರಮ ತೆಗೆದುಕೊಳ್ಳಬೇಕು. ರಾಜ್ಯದ ಎರಡೂ ಪ್ರಾಂತ್ಯಗಳ ಹಿತಾಸಕ್ತಿ ಕಾಪಾಡುವ ಸಮತೋಲನ

ಕ್ರಮಗಳನ್ನು ಸಂವಿಧಾನಬದ್ಧ ರೀತಿಯಲ್ಲಿ ತೆಗೆದುಕೊಳ್ಳುವ ಅಗತ್ಯವಿದೆ. ಮಸೂದೆಗೆ ನನ್ನ ಬೆಂಬಲ ನೀಡಲು ಹಾತೊರೆಯುತ್ತಿದ್ದೇನೆ.

*****